**ದಿ.05.02.2026 ರಂದುಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ.ಕೆ ಎಂಎಂ ಎರಡನೇ ಆರೋಪಿ ಪರಃ**

ನಾನು ನನ್ನ ಖಾಸಗಿ ದೂರಿನಲ್ಲಿ ಪ್ಯಾರನಂ.1 ರಿಂದ 14 ರಲ್ಲಿ ನನ್ನ ಗಂಡ ಮತ್ತು ನನ್ನ ನಡುವೆ ಆಗಿರುವ ಸಾಂಸರಿಕ ಜೀವನದ ಬಗ್ಗೆ ಉಲ್ಲೇಖ ಮಾಡಿರುತ್ತೇನೆ ಹೊರತು ಎರಡನೇ ಆರೋಪಿಯ ಬಗ್ಗೆ ಎಲ್ಲಿಯೂ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಪ್ಯಾರ ನಂ.1 ರಿಂದ 13 ರವರೆಗೆ ಎರಡನೇ ಆರೋಪಿಯ ಬಗ್ಗೆ ಎಲ್ಲಿಯೂ ಉಲ್ಲೇಖ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮತ್ತು ನನ್ನ ಗಂಡನ ನಡುವೆ ಕೌಟುಂಬಿಕ ಸಮಸ್ಯೆ ಇದುದರಿಂದ ನಾನು ನನ್ನ ಗಂಡನಿಂದ ವಿಚ್ಛೇದನ ಪಡೆದಿರುತ್ತೇನೆ, ಅದಕ್ಕೂ ಮೊದಲು ಎರಡನೇ ಆರೋಪಿಯ ನಡುವೆ ಹಣಕಾಸಿನ ವ್ಯವಹಾರನ್ನು ಹೊಂದಿದ್ದೇವು ಎಂದರೆ ಸರಿಯಲ್ಲ. ನನ್ನ ಹೆಸರಿನ ಚೆಕ್ಕನ್ನು ಒಂದನೇ ಆರೋಪಿ ಅಂದರೆ ನನ್ನ ಗಂಡ ಎರಡನೇ ಆರೋಪಿಗೆ ಕೊಟ್ಟಿದ್ದು, ಎರಡನೇ ಆರೋಪಿಯು ಬಂಗಾರ ಪೇಟೆ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣವನ್ನು ದಾಖಲು ಮಾಡಿದ್ದು, ಸದರಿ ಪ್ರಕರಣವೂ ವಜಾ ಗೊಂಡಿದ್ದು, ಎರಡನೇ ಆರೋಪಿಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಆ ಸಂಬಂಧ ನನಗೆ ನೋಟಿಸ್ ಬಂದಿತ್ತು ಎಂದರೆ ಸರಿ. ಸದರಿ ನೋಟಿಸ್ ಬಂದ ನಂತರ ನಾನು ವಕೀಲರನ್ನು ನೇಮಕ ಮಾಡಿಕೊಂಡಿದ್ದೆ ಎಂದರೆ ಸರಿ. ದಿ.13.01.2023 ರಂದು ನನ್ನ ಮತ್ತು ನನ್ನ ಗಂಡ ನಡುವೆ ವಿವಾಹ ವಿಚ್ಛೇದನ ಆಗಿದ್ದು, ಎರಡನೇ ಆರೋಪಿಯು ಕೌಟುಂಬಿಕ ನ್ಯಾಯಾಲಯ ದಲ್ಲಿ ಮೆಮೋ ಆಫ್ ವಿಥ್ ಡ್ರಾವೇಲ್ ಸಲ್ಲಿಸಿದ್ದೇವು ಎಂದರೆ ಸರಿಯಲ್ಲ. ಒಂದನೇ ಆರೋಪಿಯು ಮಧ್ಯಸ್ಥಿಕೆ ಕೇಂದ್ರದಲ್ಲಿ ಎರಡನೇ ಆರೋಪಿಗೆ ಕೊಡಬೇಕಾಗಿದ್ದ ಎಲ್ಲಾ ಹಣವನ್ನು ಕೊಡುತ್ತೇನೆ ಮತ್ತು ಎರಡನೇ ಆರೋಪಿಯ ಮೇಲೆ ಸಲ್ಲಿಸಿದ್ದ ಖಾಸಗಿ ದೂರನ್ನು ವಾಪಸ್ ಪಡೆದು ಕೊಳ್ಳುವುದಾಗಿ ಹೇಳಿದ್ದರು ಎಂದರೆ ಸರಿ. ಒಂದನೇ ಆರೋಪಿ ಅಂದರೆ ನನ್ನ ಗಂಡ ಎರಡನೇ ಆರೋಪಿಗೆ ನನ್ನ ಹೆಸರಿನಲ್ಲಿರುವ ಚೆಕ್ಕನ್ನು ಕೊಟ್ಟಿದ್ದು, ಎರಡನೇ ಆರೋಪಿಯು ಹಣ ನಗದೀಕರಣಕ್ಕಾಗಿ ನನ್ನ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದಾಗ, ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು

ಹಿಂಬರಹ ಬಂದಿರುತ್ತದೆಯೇ ಹೊರತು ಸಹಿ ತಾಳೆಯಾಗುವುದಿಲ್ಲ ಎಂದು ಹಿಂಬರಹ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನನ್ನ ಮೇಲೆ ಸಲ್ಲಿಸಿದ್ದ ಮೇಲ್ಮನವಿಯಲ್ಲಿ ನಾವು ಹಣವನ್ನು ಎರಡನೇ ಆರೋಪಿಗೆ ಕೊಡುತ್ತೇವೆ ಎಂದು ಮೆಮೋ ಸಲ್ಲಿಸಿದ್ದು, ಸದರಿ ಮೆಮೋಗೆ ನನ್ನ ಪರ ವಕೀಲರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಗಂಡನ ವೈವಾಹಿಕ ಸಂಬಂಧದ ದ್ವೇಷದಿಂದ ಎರಡನೇ ಆರೋಪಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಾನು ಆರೋಪಿತರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಧ್ಯಸ್ಥಿಕೆ ಕೇಂದ್ರದಲ್ಲಿ ನನ್ನ ಗಂಡ ಎರಡನೇ ಆರೋಪಿಗೆ ಕೊಡಬೇಕಾಗಿದ್ದ ಹಣವನ್ನು ತಾನು ಕೊಡುವುದಾಗಿ ಒಪ್ಪಿಕೊಂಡ ನಂತರ ಸದರಿ ಪ್ರಕರಣವನ್ನು ಮುಕ್ತಾಯ ಮಾಡಲಾಗಿರುತ್ತದೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

PW-1

**ಸಿಸಿನಂ.3291/2018**